ಅ) ಕುಂದಾಪುರ ತಾಲ್ಲೂಕು ಶಂಕರ ನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಜಿ.ಎಸ್. ಆಚಾರ್ ಪ್ರಥಮ ದರ್ಜೆ ಕಾಲೇಜು ಎಂದು ನಾಮಕರಣ ಮಾಡಲು ಸರ್ಕಾರಕ್ಕೆ ಒತ್ತಾಯ ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಇಲ್ಲಿಯತನಕವು ಆದೇಶ ನೀಡದಿರಲು ಕಾರಣವೇನು, ಹಾಗೂ ಎಂದು ನಾಮಕರಣ ಮಾಡುವ ಆದೇಶ ಹೊರಡಿಸಲಾಗುವುದು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಸದರಿ ವಿಷಯವನ್ನು ಸರ್ಕಾರೀ ಆದೇಶ ಸಂಖ್ಯೆ. ಇಡಿ 51 ಯೋಸಕ 89, ದಿನಾಂಕ 30.8.89ರಲ್ಲಿನ ಷರತ್ತುಗಳಿಗನುಸಾರ ಪರಿಶೀಲಿಸಲಾಗುತ್ತಿದ್ದು, ಶೀಘ್ರದಲ್ಲೇ ಸೂಕ್ತ ಆದೇಶ ಹೊರಡಿಸಲಾಗುವುದು.

ಕುಂದಾಪುರ ತಾಲ್ಲೂಕು ಗಂಗೋಳ್ಳಿಯಲ್ಲಿ ಕಟ್ಟಿಗೆ ಡಿಪೋ ಪ್ರಾರಂಭಿಸುವ ಬಗ್ಗೆ

2706 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಗಂಗೋಳ್ಳಿಯಲ್ಲಿ ಕಟ್ಟಿಗೆ ಡಿಪೋ ಮಾಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಇಲ್ಲವಾದಲ್ಲಿ ಬದಲಿ ವ್ಯವಸ್ಥೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕುಂದಾಪುರ ತಾಲ್ಲೂಕು ಗಂಗೊಳ್ಳಿಯಲ್ಲಿ ಸಾರ್ವಜನಿಕರಿಂದ ಕಟ್ಟಿಗೆ ಡಿಪೋ ತೆರೆಯುವ ಬಗ್ಗೆ ಈವರೆಗೆ ಬೇಡಿಕೆಬಾರದ ಕಾರಣ ಕಟ್ಟಿಗೆ ಡಿಪೋವನ್ನು ತೆರೆಯುವ ಪ್ರಶ್ನೆ ಉದ್ಭವಿಸಿಲ್ಲ.

ಆ) ಸಾರ್ವಜನಿಕರಿಂದ ಈ ಬಗ್ಗೆ ಕೋರಿಕೆ ಬಂದಲ್ಲಿ ಚಿಲ್ಲರೆ ಮಾರಾಟ ದರದ ಕಟ್ಟಿಗೆ ಡಿಪೋವನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಹರಪ್ಪನ ಹಳ್ಳಿ ತಾಲ್ಲೂಕಿನಲ್ಲಿ ವೈದ್ಯರುಗಳ ಭರ್ತಿ

2547 - ಶ್ರೀ ನಾರಾಯಣದಾಸ್ (ಹರಪ್ಪನ ಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪ್ಪನ ಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪ್ರೈಮರಿ ಹೆಲ್ತ್ (ಪಿಹೆಚ್ಸಿ) ಸೆಂಟರ್ಗಳಿವೆ?

ಆ) ಪ್ರತಿಯೊಂದು ಪಿಹೆಚ್ಸಿ ನಲ್ಲಿರುವ ಪುರುಷ ಮತ್ತು ಮಹಿಳಾ ವೈದ್ಯರುಗಳು ಎಷ್ಟು? (ಪ್ರತಿಯೊಂದು) ಪಿಹೆಚ್ಸಿ ಅನುಕ್ರಮವಾಗಿ ತಿಳಿಸುವುದು.

ಇ) ಖಾಲಿ ಇರುವ ವೈದ್ಯರುಗಳನ್ನು ಯಾವಾಗ ನೇಮಕ ಮಾಡಲಾಗುವುದು.?

ಡಾ॥ ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 11

ಆ)

ಕ್ರ. ಸಂ.	ಪ್ರಾ.ಆ.ಕೇ.	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ		ಖಾಲಿ ಹುದ್ದೆಗಳ ಸಂಖ್ಯೆ
			ಪುರುಷ	ಮಹಿಳೆ	
1.	ಅರಸೀಕೆರೆ	2	1	1	
2.	ಹಲವಾಗಲು	2	1	-	1
3.	ತೆಲಗಿ	1	1	-	-
4.	ಜೆಗಟೇರಿ	1	1	-	-
5.	ಹರಕನಾಳು	1	1	-	-
6.	ಉಚ್ಚಂಗಿದುರ್ಗ	1	1	-	-
7.	ಪುನಭಗಟ್ಟಿ	1	-	-	1
8.	ಕತ್ತೆ ಬೆನ್ನೂರು	1	-	-	1
9.	ಸಾಸಿವೆಹಳ್ಳಿ	1	-	-	1
10.	ಮತ್ತಿಹಳ್ಳಿ	1	-	-	1
11.	ಗುಂಡಗತ್ತಿ	1	-	-	1
	ಒಟ್ಟು	13	6	1	6

ಇ) ಈ ಖಾಲಿ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗದಿಂದ ಮರಳಲಿರುವ ವೈದ್ಯರುಗಳಿಂದ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ತುಂಬಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಲೋಕ ಸೇವಾ ಆಯೋಗದಿಂದ 400 ವೈದ್ಯರ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದು, ಆಯ್ಕೆಯಾದ ನಂತರ ಉಳಿದ ಹುದ್ದೆಗಳನ್ನು ತುಂಬಲಾಗುವುದು.

ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆ

2637 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಬದುಕಿದ್ದ ನವಜಾತ ಶಿಶುವನ್ನು ಸತ್ತುಹೋಗಿದೆ ಎಂದು ನಿರ್ಧರಿಸಿ ಬಿಸಾಕಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ರೀತಿ ಬದುಕಿದ್ದ ನವಜಾತ ಶಿಶುವನ್ನು ಬೆಕ್ಕು ಎತ್ತಿಕೊಂಡು ಹೋಗುತ್ತಿದ್ದುದು ನಿಜವಲ್ಲವೇ?*

ಇ) *ಹಾಗಿದ್ದಲ್ಲಿ ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?*

ಈ) *ಆಸ್ಪತ್ರೆಯಲ್ಲಿ ಬರತಕ್ಕ ರೋಗಿಗಳಿಗೆ ಪೂರ್ತಿ ವಿಶ್ವಾಸ ಮೂಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :